Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं–1 | नई दिल्ली सोमवार, दिसम्बर 22, 1986 | पुष्य 1, 1908 (शक) | खण्ड–6 |
| No. 1 | New Delhi Monday, December 22, 1986 | Pushya 1, 1908 (Saka) | Vol. 6 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೨೨, ೧೯೮೬ | ಪುಷ್ಯ ೧, ೧೯೦೮ (ಶಕ) | ಸಂಪುಟ ೬ |

## MINISTRY OF LAW AND JUSTICE
(Legislative Department)

New Delhi, October 30, 1986

The translations in Kannada of the following namely—(1) The All India Services Act, 1951 (2) The Muslim Personal Law (Shariat) Application Act, 1937 (3) The Identification of Prisoners Act, 1920 (4) The Government Saving Certificates Act, 1959 (5) The Indian Fisheries Act, 1897 (6) The Indian Christian Marriage Act, 1872 (7) The Census Act, 1948 (8) The Seamen's Provident Fund Act, 1966 (9) The Asian Development Bank Act, 1966 10) The Official Secrets Act, 1923.

ಕೆಳಕಂಡ ಅಧಿನಿಯಮಗಳು ಎಂದರೆ (೧) ಅಖಿಲ ಭಾರತ ಸೇವಾ ಅಧಿನಿಯಮ, ೧೯೫೧ (೨) ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, ೧೯೩೭ (೩) ಬಂಧಿಗಳನ್ನು ಗುರ್ತಿಸುವ ಅಧಿನಿಯಮ, ೧೯೨೦ (೪) ಸರ್ಕಾರೀ ಉಳಿತಾಯ ಪ್ರಮಾಣ ಪತ್ರ ಅಧಿನಿಯಮ, ೧೯೫೯ (೫) ಭಾರತ ಮೀನುಗಾರಿಕೆ ಅಧಿನಿಯಮ, ೧೮೯೭ (೬) ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, ೧೮೭೨ (೭) ಜನಗಣತಿ ಅಧಿನಿಯಮ, ೧೯೪೮ (೮) ನಾವಿಕರ ಭವಿಷ್ಯ ನಿಧಿ ಅಧಿನಿಯಮ, ೧೯೬೬ (೯) ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, ೧೯೬೬ (೧೦) ಸರ್ಕಾರಿ ರಹಸ್ಯ ಅಧಿನಿಯಮ, ೧೯೨೩.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

## ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, 1937

## (1937ರ ಅಧಿನಿಯಮ ಸಂಖ್ಯೆ 26)

[7ನೇ ಅಕ್ಟೋಬರ್, 1937.]

ಮುಸಲ್ಮಾನರಿಗೆ ಮುಸ್ಲಿಂ ವೈಯಕ್ತಿಕ ಕಾನೂನನ್ನು (ಷರೀಯತ್) ಅನ್ವಯ ಮಾಡುವ ಬಗ್ಗೆ ಉಪಬಂಧಿಸುವ ಅಧಿನಿಯಮ.

ಮುಸಲ್ಮಾನರಿಗೆ ಮುಸ್ಲಿಂ ವೈಯಕ್ತಿಕ ಕಾನೂನನ್ನು (ಷರೀಯತ್) ಅನ್ವಯ ಮಾಡುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ, ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:-

**1. ಚಿಕ್ಕ ಹೆಸರು ಮತ್ತು ವ್ಯಾಪ್ತಿ.–** (1) ಈ ಅಧಿನಿಯಮವನ್ನು ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, 1937 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಮುಸಲ್ಮಾನರಿಗೆ ವೈಯಕ್ತಿಕ ಕಾನೂನಿನ ಅನ್ವಯ.–** ಮರಣ ಶಾಸನ ರಹಿತ ಉತ್ತರಾಧಿಕಾರ, ವಾರಸಿನಿಂದ ಬಂದ ಅಥವಾ ಕರಾರು ಅಥವಾ ದಾನ ಅಥವಾ ವೈಯಕ್ತಿಕ ಕಾನೂನಿನ ಇತರ ಯಾವುದೇ ಉಪಬಂಧದ ಮೇರೆಗೆ ಪಡೆದ ವೈಯಕ್ತಿಕ ಸ್ವತ್ತನ್ನು ಒಳಗೊಂಡು ಸ್ತ್ರೀಯರ ವಿಶೇಷ ಸ್ವತ್ತು, ವಿವಾಹ, ತಲಾಖ್, ಎಲಾ, ಜಿಹಾರ್, ಲಿಯಾನ್, ಖುಲಾ ಮತ್ತು ಮುಬಾರಾತ್ ಇವುಗಳನ್ನು ಒಳಗೊಂಡು ವಿವಾಹ ವಿಘಟನೆ, ಜೀವನಾಂಶ, ವಿಧವಾದಾಯ, ಪಾಲಕತ್ವ, ದಾನಗಳು, ನ್ಯಾಸಗಳು ಮತ್ತು ನ್ಯಾಸ ಸ್ವತ್ತುಗಳು (ಧರ್ಮ ಕಾರ್ಯಗಳು ಮತ್ತು ಧರ್ಮಾರ್ಥ ಸಂಸ್ಥೆಗಳು ಮತ್ತು ಧರ್ಮಾರ್ಥ ಹಾಗೂ ಧಾರ್ಮಿಕ ದತ್ತಿಗಳನ್ನು ಹೊರತುಪಡಿಸಿ) ವಕ್‌ಫ್‌ಗಳು ಇವುಗಳ ಸಂಬಂಧದಲ್ಲಿನ ಎಲ್ಲ ಪ್ರಶ್ನೆಗಳಲ್ಲಿ (ಕೃಷಿ ಭೂಮಿಗೆ ಸಂಬಂಧಿಸಿದ ಪ್ರಶ್ನೆಗಳನ್ನುಳಿದು) ತದ್ವಿರುದ್ಧವಾಗಿ ಯಾವುದೇ ರೂಢಿ ಅಥವಾ ಆಚರಣೆಯಲ್ಲಿ ಏನೇ ಇದ್ದಾಗ್ಯೂ, ಮುಸಲ್ಮಾನರು ಪಕ್ಷಕಾರರಾಗಿರುವ ಪ್ರಕರಣಗಳಲ್ಲಿ ತೀರ್ಮಾನದ ನಿಯಮವು ಮುಸ್ಲಿಂ ವೈಯಕ್ತಿಕ ಕಾನೂನು (ಷರೀಯತ್) ಆಗಿರತಕ್ಕದ್ದು.

**3. ಘೋಷಣೆ ಮಾಡುವ ಅಧಿಕಾರ.–** (1) ಯಾವ ವ್ಯಕ್ತಿ, ನಿಯಮಿಸಲಾದ ಪ್ರಾಧಿಕಾರಗಳಿಗೆ,–

(ಎ) ತಾನು ಮುಸ್ಲಿಂ ಎಂದು; ಮತ್ತು

(ಬಿ) ಭಾರತ ಕರಾರು ಅಧಿನಿಯಮ, 1872 (1872ರ 9)ರ ಪ್ರಕರಣ 11ರ ಅರ್ಥವ್ಯಾಪ್ತಿಯೊಳಗೆ ಕರಾರು ಮಾಡಿಕೊಳ್ಳಲು ತಾನು ಸಕ್ಷಮನಾಗಿರುವೆನೆಂದು; ಮತ್ತು

(ಸಿ) ತಾನು ಈ ಅಧಿನಿಯಮ ವ್ಯಾಪ್ತವಾಗುವಂಥ ರಾಜ್ಯಕ್ಷೇತ್ರಗಳ ನಿವಾಸಿ ಎಂದು

– ಮನದಟ್ಟು ಮಾಡಿಕೊಡುತ್ತಾನೋ ಆ ಯಾರೇ ವ್ಯಕ್ತಿಯು, ನಿಯಮಿಸಲಾದ ನಮೂನೆಯಲ್ಲಿ ಮತ್ತು ನಿಯಮಿಸಲಾದ ಪ್ರಾಧಿಕಾರಿಯ ಮುಂದೆ ದಾಖಲು ಮಾಡುವ ಘೋಷಣೆಯ ಮೂಲಕ, ಈ ಪ್ರಕರಣದ ಉಪಬಂಧಗಳ ಪ್ರಯೋಜನವನ್ನು ಪಡೆಯಲು ಬಯಸುವುದಾಗಿ ಘೋಷಿಸಬಹುದು ಮತ್ತು ತದನಂತರ ಪ್ರಕರಣ 2ರ ಉಪಬಂಧಗಳು, ಅದರಲ್ಲಿ ನಮೂದಿಸಿದ ವಿಷಯಗಳ ಜೊತೆಗೆ ದತ್ತು, ಮರಣಶಾಸನಗಳು ಮತ್ತು ಮರಣಶಾಸನ ಸ್ವತ್ತುಗಳನ್ನು ಕೂಡ ನಿರ್ದಿಷ್ಟಪಡಿಸಿದ್ದರೆ ಹೇಗೋ ಹಾಗೆ ಘೋಷಕನಿಗೆ ಮತ್ತು ಆತನ ಎಲ್ಲ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮತ್ತು ಅವರ ವಂಶಜರಿಗೆ ಅನ್ವಯವಾಗತಕ್ಕದ್ದು.

(2) ನಿಯಮಿಸಲಾದ ಪ್ರಾಧಿಕಾರಿಯು ಉಪ ಪ್ರಕರಣ (1)ರ ಮೇರೆಗಿನ ಘೋಷಣೆಯನ್ನು ಅಂಗೀಕರಿಸಲು ನಿರಾಕರಿಸಿದಲ್ಲಿ, ಆ ಘೋಷಣೆಯನ್ನು ಮಾಡಬಯಸುವ ವ್ಯಕ್ತಿಯು ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಬಗ್ಗೆ ನೇಮಿಸಬಹುದಾದಂಥ ಅಧಿಕಾರಿಗೆ ಅಪೀಲು ಮಾಡಿಕೊಳ್ಳಬಹುದು ಮತ್ತು ಅಪೀಲುದಾರನು ಆ ಘೋಷಣೆಯನ್ನು ಮಾಡಲು ಹಕ್ಕುಳ್ಳವನಾಗಿರುವನೆಂದು ಅಂಥ ಅಧಿಕಾರಿಗೆ ಮನದಟ್ಟಾದಲ್ಲಿ ಅವನು ನಿಯಮಿಸಲಾದ ಪ್ರಾಧಿಕಾರಿಗೆ ಅದನ್ನು ಅಂಗೀಕರಿಸಲು ಆದೇಶಿಸಬಹುದು.

**4. ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ, ಎಂದರೆ:–

(ಎ) ಈ ಅಧಿನಿಯಮದ ಮೇರೆಗೆ ಯಾವ ಪ್ರಾಧಿಕಾರಿಯ ಮುಂದೆ ಮತ್ತು ಯಾವ ನಮೂನೆಯಲ್ಲಿ ಘೋಷಣೆಯನ್ನು ಮಾಡತಕ್ಕದ್ದೆಂಬುದನ್ನು ನಿಯಮಿಸಲು;

(ಬಿ) ಘೋಷಣೆಗಳನ್ನು ದಾಖಲು ಮಾಡುವುದಕ್ಕಾಗಿ ಮತ್ತು ಈ ಅಧಿನಿಯಮದ ಮೇರೆಗೆ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಯಾರೇ ವ್ಯಕ್ತಿಯು ಖಾಸಗಿ ನಿವಾಸ ಸ್ಥಳಗಳಲ್ಲಿ ಹಾಜರಾಗುವುದಕ್ಕಾಗಿ ಸಂದಾಯ ಮಾಡಬೇಕಾದ ಫೀಜುಗಳನ್ನು ನಿಯಮಿಸಲು ಮತ್ತು ಅಂಥ

ಫೀಜುಗಳನ್ನು ಸಂದಾಯ ಮಾಡತಕ್ಕ ಕಾಲಗಳನ್ನು ಮತ್ತು ಅವುಗಳನ್ನು ವಿಧಿಸತಕ್ಕ ರೀತಿಯನ್ನು ನಿಯಮಿಸಲು

– ಉಪಬಂಧಿಸಬಹುದು.

(3) ಈ ಪ್ರಕರಣದ ಉಪಬಂಧಗಳ ಮೇರೆಗೆ ರಚಿಸಲಾದ ನಿಯಮಗಳನ್ನು ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ತದನಂತರ ಅವು ಈ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದರೆ ಹೇಗೊ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು.

**5. [ಕೆಲವು ಸನ್ನಿವೇಶಗಳಲ್ಲಿ ನ್ಯಾಯಾಲಯದಿಂದ ವಿವಾಹ ವಿಘಟನೆ.–** 1939ರ ಮುಸ್ಲಿಂ ವಿವಾಹಗಳ ವಿಘಟನೆ ಅಧಿನಿಯಮ, 1939 (1939ರ 8)ರ ಪ್ರಕರಣ 6ರ ಮೂಲಕ ನಿರಸನಗೊಳಿಸಲಾಗಿದೆ.]

**6. ನಿರಸನಗಳು.–** ಈ ಕೆಳಗೆ ನಮೂದಿಸಿರುವ ಅಧಿನಿಯಮಗಳ ಮತ್ತು ರೆಗ್ಯೂಲೇಷನ್ ಗಳ ಉಪಬಂಧಗಳನ್ನು ಈ ಅಧಿನಿಯಮದ ಉಪಬಂಧಗಳೊಂದಿಗೆ ಅವು ಅಸಂಗತವಾಗಿರುವಷ್ಟರ ಮಟ್ಟಿಗೆ ನಿರಸಿತವಾಗತಕ್ಕದ್ದು, ಎಂದರೆ:–

(1) 1927ರ ಬೊಂಬಾಯಿ ರೆಗ್ಯೂಲೇಷನ್ IV ರ ಪ್ರಕರಣ 26;

(2) ಮದ್ರಾಸ್ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1873 (1873 ರ 3)ರ ಪ್ರಕರಣ 16;

(3) ***

(4) ಔಧ್ ಕಾನೂನುಗಳ ಅಧಿನಿಯಮ, 1876 (1876ರ 18)ರ ಪ್ರಕರಣ 3;

(5) ಪಂಜಾಬ್ ಕಾನೂನುಗಳ ಅಧಿನಿಯಮ, 1872 (1872ರ 4)ರ ಪ್ರಕರಣ 5;

(6) ಕೇಂದ್ರ ಪ್ರಾಂತ್ಯಗಳ ಕಾನೂನು ಅಧಿನಿಯಮ, 1875 (1875ರ 20)ರ ಪ್ರಕರಣ 5; ಮತ್ತು

(7) ಅಜ್ಮೇರ್ ಕಾನೂನುಗಳ ರೆಗ್ಯುಲೇಷನ್, 1877 (1877ರ 3)ರ ಪ್ರಕರಣ 4;

* * * * *